ಕಲ್ಪನೆ ಕಾವ್ಯ

## ಬದುಕ ಹೊಣೆ, ಬಿದಿರ ಹೆಣೆ

ಬಗಲಲ್ಲಿ ಪುಟ್ಟ ಮಗುವು
ಮರೆಸಿತೇ ಭವದ ನೋವು
ಹೆಗಲಲಿ ಹೊಣೆಗಾರಿಕೆ ಅರಿವು
ಮರೆಮಾಚಿತೇ ದೇಹದ ದಣಿವು

ಸುಡು ಬಿಸಿಲೋ ನೆರಳೋ
ಸುಳಿಗಾಳಿಯೋ ಬಿರುಮಳೆಯೋ
ಕೋಪಿಸಿ ತಾಪಿಸಿ ನಿಂದಿಸಿ ಶಾಪಿಸಿ
ತೊರೆಯಲು ಸಾಧ್ಯವೇ ದೂರಕೆ

ಅಮ್ಮನ ಅಸ್ಮಿತೆ ಕೂಸಿಗೆ ಭದ್ರತೆ
ಚಿಗುರ ಪೋಷಣೆಯೇ ತಾಯ ಆದ್ಯತೆ
ಪಿಳಿಪಿಳಿ ಕಣ್ಣಿನ ಕಂದ ತಾಯಿ ದೈವ
ಬಡತನದ ಬೇಗೆಯಲಿ ಪ್ರೀತಿವೈಭವ

ರಂಗುರಂಗಿನ ಬುಟ್ಟಿಗಳ ಹೆಣೆಯುತ್ತಾ
ತನ್ನ ಬಾಳ ಬುತ್ತಿಯ ಹೊರುವ ಕಾಯಕ
ಬಿದಿರು ಮೊರಗಳ ಒಪ್ಪ ಓರಣ ಮಾಡಿ
ಬದುಕ ಹಸನಾಗಿಸಿ ನಿಲ್ಲುವೆನೆ ತವಕ

ಬಣ್ಣಬಣ್ಣದ ಬೀಸಣಿಕೆ ಕಟ್ಟುತಲಿ
ಜನಮನದ ತಂಗಾಳಿ ಬಯಸುತಲಿ
ನಿದ್ದೆಯ ಕಂದನೆಡೆಗೆ ದೃಷ್ಟಿ ಹಾಯಿಸುತ
ಬೆವರಹನಿ, ಕಣ್ಣಂಚಿನ ನೀರಹನಿಯಲಿ

ಸೂರ್ಯಾಸ್ತದ ಕಾತುರದಲಿ ಮನವು
ಹಾತೊರೆದು ದಿನದ ದುಡಿಮೆಯಲಿ
ಪಾಲಿಗೆ ಬಂದದ್ದು ಜೋಳಿಗೆಗೆ ಎನುತ
ನಿಟ್ಟುಸಿರ ಬಿಟ್ಟು ಕುಳಿತಿಹಳು ಮಾತೆ

**ಮೀರಾ ನಾಡಿಗ್, ಚಿತ್ರದುರ್ಗ**



## ಜೀವನ ವ್ಯಾಪಾರ

ಬೀದಿಯ ಬದಿಯಲಿ ಭರವಸೆ ಊರಿ
ನಡೆದಿದೆ ಜೀವನ ವ್ಯಾಪಾರ
ಕೂಡುತ ಕಳೆಯುತ ನಡೆದದ್ದೆಲ್ಲಾ
ಕನಸಿನ ಹೆಣಿಗೆಯ ವ್ಯವಹಾರ

ಬರಿಯ ಬಿದಿರು ಕಾವ್ಯವೇ ಆಗಿದೆ
ಕಲಾಕಾರನ ಜಾಣ್ಮೆಯಲಿ!
ನೆಮ್ಮದಿ ನಗೆಯನು ಹೊಮ್ಮಿಸಬಹುದೇ
ಬೇಯುತಿರುವ ತಾಯಿಯಲಿ?

ನಾಳೆಯ ನಲಿವಿಗೆ ನೆಮ್ಮದಿ ನಿದಿರೆ
ಅಮ್ಮನ ನೆರಳಿನ ತಂಪಿನಲಿ
ಬೇರಿಗೆ ಅಮಿತದ ಭರವಸೆ ಹೊಮ್ಮಿದೆ
ಬೆಳಕಿಗೆ ತೆರೆದ ಚಿಗುರಿನಲಿ

ಹೆಣಿಗೆಯ ಹಾಗೆಯೇ ಬದುಕಿನ ಪಯಣವು
ಒಂದಕ್ಕೊಂದು ಬೆಸೆಯುತ್ತಾ
ಎಲ್ಲಿಂದೆಲ್ಲಿಗೂ ತಲುಪಲೂಬಹುದು
ಭಾಗ್ಯದ ಬಾಗಿಲು ತೆರೆಯುತ್ತಾ

**ವಿಶ್ವನಾಥ ಕುಲಾಲ್, ಮಿತ್ತೂರು**